**ಸಾಕ್ಷಿಯನ್ನು ದಿಃ 17.11.2025 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ 2 ನೇ ಎದುರುದಾರರ ಪರ ವಕೀಲರಿಂದಃ**

ಅಪಘಾತ ದಿಃ 22.04.2023 ರಂದು ಬೂದನೂರು ಗ್ರಾಮದ ಬಳಿ ಆಯಿತು. ಆ ದಿನ ಮೂರು ವಾಹನಕ್ಕೆ ಅಪಘಾತ ಆಯಿತು ಎಂದರೆ ಸರಿ. ಕೆಎ-42-ಬಿ-1721 ವಾಹನ ಕಾಂಕ್ರಿಟ್ ಮಿಕ್ಚರ್ ವಾಹನದಿಂದ ಅಪಘಾತ ಆಯಿತು. ಆ ಸಮಯದಲ್ಲಿ ಒಂದು ಟಿ.ಟಿ. ವಾಹನ ಕೆಎ-03-ಎಸಿ-5288 ಎಹ ಡಿಕ್ಕಿ ಪಡಿಸಿತು. ಮೇಲ್ಕಂಡ ಟಿ.ಟಿ ವಾಹನ ಎದುರಿನ ಲಾರಿಗೆ ಡಿಕ್ಕಿ ಪಡಿಸಿ ಹಿಂಭಾಗಕ್ಕೆ ಚಲಿಸಿ ನನ್ನ ಕಾರಿಗೆ ಡಿಕ್ಕಿ ಪಡಿಸಿರುತ್ತದೆ. ಟಿ.ಟಿ. ವಾಹನದ ಬಗ್ಗೆ ಸಂಗೀತ ಎನ್ನುವವರು ದೂರು ನೀಡಿದ್ದಾರೆ ಎಂದರೆ ಸರಿ. ಸದರಿ ದೂರು ನಿಪಿ. 2 ಆಗಿದೆ. ನಿಪಿ. 2 ರಲ್ಲಿ ನಾನೇ ಅತಿವೇಗದಿಂದ ಚಲಾಯಿಸಿ ಅವರ ಟಿ.ಟಿ. ವಾಹನಕ್ಕೆ ಡಿಕ್ಕಿ ಪಡಿಸಿದ್ದೇನೆ ಎಂದು ದೂರಿದ್ದಾರೆ ಎಂದರೆ ನಾನು ಡಿಕ್ಕಿ ಪಡಿಸಿಲ್ಲ ಎನ್ನುತ್ತಾರೆ. ಟಿ.ಟಿ ವಾಹನ ನನಗೆ ಡಿಕ್ಕಿ ಪಡಿಸಿದ ಬಗ್ಗೆ ದೂರು ನೀಡಿದ್ದೇನೆ. ಆ ದೂರು ಕಡತದಲ್ಲಿ ಕಾಣುತ್ತಿಲ್ಲ. ಈ ಪ್ರಕರಣದಲ್ಲಿ ನಾವು ಟಿ.ಟಿ ವಾಹನದವರನ್ನು ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ. ಕಾಂಕ್ರಿಟ್ ಮಿಕ್ಚರ್ ವಾಹನ ನನಗೆ ತಗುಲಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಸದರಿ ವಾಹನ ಟಿ.ಟಿ ವಾಹನಕ್ಕೆ ತಗುಲಿ ಸದರಿ ಟಿ.ಟಿ ವಾಹನ ನನಗೆ ಬಂದು ಡಿಕ್ಕಿ ಪಡಿಸಿರುತ್ತದೆ ಎನ್ನುತ್ತಾರೆ. ನಾವು ಕಾಂಕ್ರಿಟ್ ಮಿಕ್ಚರ್ ವಾಹನದವರನ್ನು ಮಾತ್ರ ಪಕ್ಷಗಾರರನ್ನಾಗಿ ಮಾಡಿದ್ದೇನೆ ಎಂದರೆ ಸರಿ. ಆದ ಕಾರಣ ಅರ್ಜಿ ಊರ್ಜಿತ ಅಲ್ಲ ಎಂದರೆ ಸರಿಯಲ್ಲ.

2. ನನಗೆ ಅಪಘಾತದಿಂದ ಕೈ ಫ್ರಾಕ್ಚರ್ ಆಗಿದೆ. ನನ್ನ ವಾಹನಕ್ಕೆ ಓರಿಯಂಟಲ್ ಇನ್ಸೂರೆನ್ಸ್ ಕಂಪನಿಯಿಂದ ವಿಮೆ ಇತ್ತು. ನನಗೆ ಒಟ್ಟು ರೂ. 2,30,000/- ಕ್ಕೂ ಹೆಚ್ಚು ಖರ್ಚಾಗಿದ್ದು ವಾಹನ ರಿಪೇರಿ ಬಾಬ್ತು ನಮ್ಮ ವಿಮಾ ಕಂಪನಿಯಿಂದ ಅಂದಾಜು ರೂ. 1,25,000/- ಬಂದಿರುತ್ತದೆ. ನನ್ನ ವಾಹನಕ್ಕೆ ಪ್ಯಾಕೇಜ್ ಪಾಲಿಸಿ ಇತ್ತು. ಅದು ಗಾಯಾಳುವಿಗೂ ಸಹ ಪಾಲಿಸಿ ಕವರ್ ಆಗುತ್ತದೆ ಎಂದರೆ ಸರಿಯಲ್ಲ. ವಿಮಾ ಕಂಪನಿಯಿಂದ

ಬಂದ ಹಣದ ಬಗ್ಗೆ ದಾಖಲೆ ಹಾಜರು ಪಡಿಸಬಹುದು. ನನಗೆ ಅಪಘಾತದಿಂದ ಸಾಮಾನ್ಯ ಸ್ವರೂಪದ ಗಾಯ ಆಗಿದೆ ಎಂದರೆ ಸರಿಯಲ್ಲ. ಅಪಘಾತ ನನ್ನ ಅಜಾಗರೂಕತೆಯಿಂದ ಟಿ.ಟಿ. ವಾಹನಕ್ಕೆ ಡಿಕ್ಕಿ ಪಡಿಸಿ ಆಗಿದೆ ಎಂದರೆ ಸರಿಯಲ್ಲ. ನಾನು ಟಿ. ನರಸೀಪುರದಲ್ಲಿ ಗಾರ್ಮೆಂಟ್ಸ್‌ನಲ್ಲಿ ಕೆಲಸ ಮಾಡುತ್ತಿದ್ದೆ. ಆ ಬಗ್ಗೆ ದಾಖಲೆ ಹಾಜರು ಪಡಿಸಿಲ್ಲ. ರೂ. 1,10,000/- ಸಂಬಳ ಪ್ರತಿ ತಿಂಗಳಿಗೆ ಬರುತ್ತಿತ್ತು. ಪ್ರಮಾಣ ಪತ್ರದಲ್ಲಿ ನನ್ನ ಆದಾಯದ ಬಗ್ಗೆ ಸುಳ್ಳಾಗಿ ಬರೆಯಿಸಿರುತ್ತೇನೆ ಎಂದರೆ ಸರಿ. ನನಗೆ ಆದ ನ್ಯೂನತೆ ಬಗ್ಗೆ ವೈದ್ಯರ ಪ್ರಮಾಣ ಪತ್ರ ಹಾಜರು ಪಡಿಸಿಲ್ಲ. ನಾನು ಆಸ್ಪತ್ರೆಯಲ್ಲಿ ಒಳರೋಗಿಯಾಗಿ ದಾಖಲಾಗಿಲ್ಲ. ಅಂದಾಜು ರೂ. 30,000/- ಔಷಧಿ ಖರ್ಚಾಗಿದೆ. ನನ್ನ ಅರ್ಜಿಯಲ್ಲಿ ಬೈಕ್ ರಿಪೇರಿಗೆ ಒಂದು ಲಕ್ಷ ಎಂದು ನಮೂದಿಸಿದ್ದೇನೆ ಎಂದರೆ ಸಾಕ್ಷಿಯು ನನ್ನ ವಾಹನ ಕಾರು ಎನ್ನುತ್ತಾರೆ. ವಿಮಾ ಕಂಪನಿಯಿಂದ ವಾಹನ ರಿಪೇರಿ ಬಗ್ಗೆ ಎಸ್ಟಿಮೇಟ್ ಹಾಕಿಸಿದ್ದೇವೆ ಅದನ್ನು ಹಾಜರು ಪಡಿಸಲು ತೊಂದರೆ ಇಲ್ಲ. ನಿಪಿ. 8 ಬಿಲ್ ಅಲ್ಲ ಇನ್ವಾಸ್ ಎಂದರೆ ಸರಿ. ಬಿಲ್ ಇದೆ ಎನ್ನುತ್ತಾರೆ. ವಾಹನ ಬಗೆಗಿನ ಬಿಲ್ಲುಗಳನ್ನು ನಾನು ವಿಮಾ ಕಂಪನಿಗೆ ಕೊಟ್ಟಿದ್ದೇನೆ. ವಾಹನದ ಬಿಲ್ಲುಗಳನ್ನು ನಾನು ಎರಡು ಕಡೆ ಕೇಳುತ್ತಿದ್ದೇನೆ ಎಂದರೆ ಸಾಕ್ಷಿಯು ಸದರಿ ವಿಮಾ ಕಂಪನಿಯವರು ಪಾವತಿಸಿದ್ದನ್ನು ಹೊರತು ಪಡಿಸಿ ಬಾಕಿ ಬಾಬ್ತು ಕೇಳುತ್ತಿದ್ದೇನೆ ಎನ್ನುತ್ತಾರೆ. ನನ್ನ ಉದ್ಯೋಗದ ಬಗ್ಗೆ ಪ್ರಮಾಣ ಪತ್ರದಲ್ಲಿ ಬರೆಸಿಲ್ಲ ಎಂದರೆ ಸರಿ. ನಾನು ಟಿ.ಟಿ. ವಾಹನದವರನ್ನು ಪಕ್ಷಗಾರರನ್ನಾಗಿ ಮಾಡದೇ ಇರುವ ಕಾರಣ ಅರ್ಜಿ ಊರ್ಜಿತವಾಗುವುದಿಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

(ನನ್ನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ.

ಸಹಿ/-

ಹೆಚ್ಚುವರಿ ಲಘು ವ್ಯವಹಾರಗಳ ನ್ಯಾಯಾಧೀಶರು

ಮತ್ತು ಎಂ.ಎ.ಸಿ.ಟಿ., ಮೈಸೂರು.